ಕಾಲೇಜುಗಳ ಅಭಿವೃದ್ಧಿಗೆ ಧನ ಸಹಾಯ

118(1949); ಶ್ರೀ ಸುರೇಶ್ ಬಾಬು ಸಿ.ಬಿ.

ಅ) 2013–14ನೇ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ ಮತಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನವೆಷ್ಟು; ಇಲ್ಲವಾದಲ್ಲಿ ಅದಕ್ಕೆ ಕಾರಣವೇನು; ಈಗಲಾದರೂ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಮಾಹಿತಿ ಒದಗಿಸುವುದು)

ಶ್ರೀ ಕಿಮ್ಮನ್ನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2013–14ನೇ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ ಮತಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಅಭಿವೃದ್ಧಿಗಾಗಿ ಯಾವುದೇ ಅನುದಾನವನ್ನು ಮೀಸಲಿಟ್ಟಿರುವುದಿಲ್ಲ.

ಆದರೆ, ಆರ್‌ಐಡಿಎಫ್ ಯೋಜನೆಯಡಿ ಸರ್ಕಾರಿ ಪದವಿ ಪೂರ್ವ ಕಾಲೇಜು ಚಿಕ್ಕನಾಯಕನಹಳ್ಳಿ ಇಲ್ಲಿಗೆ ಎರಡು ಕೊಠಡಿ ಮತ್ತು ನಾಲ್ಕು ಶೌಚಾಲಯಗಳ ನಿರ್ಮಾಣಕ್ಕಾಗಿ 30.00 ಲಕ್ಷರೂಗಳ ಪ್ರಸ್ತಾವನೆಯನ್ನು ನಬಾರ್ಡ್‌ಗೆ ಸಲ್ಲಿಸಲಾಗಿದೆ.

ನಬಾರ್ಡ್‌ನಿಂದ ಅನುಮೋದನೆ ದೊರೆತ ನಂತರ ಕಾಮಗಾರಿಗೆ ಅನುದಾನ ಬಿಡುಗಡೆ ಬಗ್ಗೆ ಕ್ರಮವಹಿಸಲಾಗುವುದು.

ಶ್ರೀ ಸಿ.ಬಿ. ಸುರೇಶ್ ಬಾಬು:– ಮಾನ್ಯ ಅಧ್ಯಕ್ಷರೆ, ಈಗ ನನ್ನ ಕ್ಷೇತ್ರದಲ್ಲಿ ಕಾಲೇಜುಗಳು ಏನಿವೆ, ಅಲ್ಲಿ ಮೂಲಭೂತ ಸೌಕರ್ಯಗಳು ಇಲ್ಲ ಎನ್ನುವುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಈ ಎಲ್ಲಾ ಕಾಲೇಜುಗಳಲ್ಲಿ ಗ್ರಂಥಾಲಯಗಳು, ಕೆಲವು ಕಾಲೇಜುಗಳಲ್ಲಿ ಶೌಚಾಲಯಗಳು ಮತ್ತು ಪ್ರಯೋಗಾಲಯಗಳು ಕೂಡ ಹಲವಾರು ಕಾಲೇಜುಗಳಲ್ಲಿ ಇಲ್ಲ.

ಅಧ್ಯಕ್ಷರು:– ನಿಮಗೆ ಏನು ಉತ್ತರ ಬೇಕೆನ್ನುವುದಕ್ಕೆ ಪ್ರಶ್ನೆಯನ್ನು ನೋಡಿಕೊಳ್ಳಿ.

ಶ್ರೀ ಸಿ.ಬಿ. ಸುರೇಶ್ ಬಾಬು:– ನಾನು ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲವೆಂದು ಕೇಳಿರುವುದು.

ಅಧ್ಯಕ್ಷರು:– ತಾವು ಕೇಳಿರುವ ಪ್ರಶ್ನೆಗೆ ಉತ್ತರ ಹೇಳಿದ್ದಾರಲ್ಲ. ಚಿಕ್ಕನಾಯಕನ ಹಳ್ಳಿಗೆ ಎರಡು ಕೊಠಡಿ ಮತ್ತು ನಾಲ್ಕು ಶೌಚಾಲಯಗಳ ನಿರ್ಮಾಣಕ್ಕಾಗಿ 30.00 ಲಕ್ಷ ರೂ.ಗಳ ಪ್ರಸ್ತಾವನೆಯನ್ನು ನಬಾರ್ಡ್‌ಗೆ ಸಲ್ಲಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರಲ್ಲ.

ಶ್ರೀ ಸಿ.ಬಿ. ಸುರೇಶ್ ಬಾಬು:– ನನಗೆ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು:– ಈಗ ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಸಿ.ಬಿ. ಸುರೇಶ್ ಬಾಬು:– ಮಾನ್ಯ ಅಧ್ಯಕ್ಷರೆ, ಹಲವಾರು ಕಾಲೇಜುಗಳಲ್ಲಿ ಶೌಚಾಲಯಗಳು ಇಲ್ಲ. ಹುಳಿಯಾರಿನಲ್ಲಿ ಒಂದು ಹೆಣ್ಣುಮಕ್ಕಳ ಕಾಲೇಜು ಇದೆ, ಅಲ್ಲಿ ಇಲ್ಲ.

ಅಧ್ಯಕ್ಷರು:– ಹಲವಾರು ಕಾಲೇಜು ಎಂದರೆ ಯಾವ ರೀತಿ ಉತ್ತರ ಹೇಳುತ್ತಾರೆ. ಇಂತಿಂಥ ಕಾಲೇಜು ಎಂದರೆ ಹೇಳುತ್ತಾರೆ.

ಶ್ರೀ ಸಿ.ಬಿ. ಸುರೇಶ್ ಬಾಬು:– ನನ್ನ ಕ್ಷೇತ್ರದಲ್ಲಿ ಇರುವುದು.

ಅಧ್ಯಕ್ಷರು:– ಅದನ್ನೆ ನಿಮ್ಮ ಕ್ಷೇತ್ರದಲ್ಲಿ ಯಾವ ಕಾಲೇಜಿನಲ್ಲಿ ಇಲ್ಲವೆಂದು ಕೇಳಬೇಕು.

ಶ್ರೀ ಸಿ.ಬಿ. ಸುರೇಶ್ ಬಾಬು:– ಹುಳಿಯಾರಿನಲ್ಲಿ ಶೌಚಾಲಯ ಇಲ್ಲ. ಬೆಳಗುಲಿ ಕಾಲೇಜಿನಲ್ಲಿ ಕೂಡ ಶೌಚಾಲಯವಿಲ್ಲ. ನಾನು ಕಾಲೇಜುಗಳ ಪೂರ್ಣ ವಿವರವನ್ನು ಅಧಿಕಾರಿಯ ಹತ್ತಿರ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು:– ನೀವು ಅಧಿಕಾರಿಯ ಹತ್ತಿರ ವಿವರವನ್ನು ತೆಗೆದುಕೊಂಡಿರಬಹುದು, ಆದರೆ ನೀವು ಇಲ್ಲಿ ಪ್ರಶ್ನೆ ಕೇಳಿರುವುದಿಲ್ಲ. ಈಗ ಪ್ರಶ್ನೆ ಕೇಳಿ.

ಶ್ರೀ ಸಿ.ಬಿ. ಸುರೇಶ್ ಬಾಬು:– ಮೂಲಭೂತ ಸೌಕರ್ಯಗಳು ಇಲ್ಲವೆಂದು ಕೇಳಿದ್ದೇನೆ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ನಮಗೆ ಒದಗಿಸಿರುವಂತಹ ಪ್ರಶ್ನೆಯಲ್ಲಿ 2013–14ನೇ ಸಾಲಿನಲ್ಲಿ ಚಿಕ್ಕನಾಯಕನ ಹಳ್ಳಿ ಮತಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನವೆಷ್ಟು ಎಂದು ಕೇಳಿದ್ದಾರೆ. ನಾವು 30 ಲಕ್ಷ ರೂ.ಗಳ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಏಪ್ರಿಲ್ 1ನೇ ತಾರೀಖು ನಂತರದಲ್ಲಿ ಅದರ ಅಭಿವೃದ್ಧಿಯನ್ನು ಮಾಡುತ್ತೇವೆ. ಈಗಾಗಲೇ RIDFನಿಂದ ಮಂಜೂರಾಗಿದೆ. ಅದನ್ನು ಈಗಾಗಲೇ ಕಳುಹಿಸಿದ್ದೇವೆ.

ಶ್ರೀ ಸಿ.ಬಿ. ಸುರೇಶ್ ಬಾಬು:– ನಾನು ಚಿಕ್ಕನಾಯಕನ ಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಕಾಲೇಜು ಎಂದರೆ ಯಾವುದು ಸ್ವಾಮಿ? ಒಂದೇ ಬರುತ್ತದೆಯೇ? ಅಲ್ಲಿ ಇರುವಂತಹ ಎಲ್ಲಾ ಕಾಲೇಜುಗಳ ಬಗ್ಗೆ ಕೇಳಿದ್ದೇನೆ.

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು ಈಗ ಪ್ರತಿಯೊಂದು ಶಾಲಾ–ಕಾಲೇಜುಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಪ್ರಕಾರ ಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿ.

ಶ್ರೀ ಕಿಮ್ಮನೆ ರತ್ನಾಕರ್:– ಇಲ್ಲಿ ಏನು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಮಾತ್ರ ನಾನು ಉತ್ತರ ಹೇಳಿದ್ದೇನೆ. ಉಳಿದಿರುವುದರ ಬಗ್ಗೆ ನಾವು ಕಾರ್ಯಕ್ರಮ ರೂಪಿಸಿದ್ದೇವೆ.

ಅಧ್ಯಕ್ಷರು:– ಅದು ತುಂಬಾ essential, ಅದನ್ನು ಮಾಡಿ. ಇದು ಸರ್ಕಾರದ ಬದ್ಧತೆ ಇದೆ. ಅದನ್ನು implement ಮಾಡುವುದು ನಿಮ್ಮ ಜವಾಬ್ದಾರಿ. ಅದನ್ನು ಮಾಡಿ.

ಶಿಕ್ಷಣ ಸಂಸ್ಥೆ ನವೀಕರಣ

119(947); ಶ್ರೀ ಲೋಬೋ.ಜೆ.ಆರ್

ಅ) ಶಿಕ್ಷಣ ಸಂಸ್ಥೆಯನ್ನು ಅಲ್ಪಸಂಖ್ಯಾತರ ಸಮುದಾಯ ಸಂಸ್ಥೆ ಎಂದು ಘೋಷಿಸಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ?

ಆ) ಶೇಕಡಾ 75% ರಷ್ಟು ಅಲ್ಪಸಂಖ್ಯಾತ ಮಕ್ಕಳು ಇರಬೇಕೆಂದು ನೀಡಿರುವ ಸುತ್ತೋಲೆಗೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇದ್ದರೂ, ಅದನ್ನು ಪಾಲಿಸದೇ ಇಲಾಖೆಯು ಅಲ್ಪಸಂಖ್ಯಾತ ಸಂಸ್ಥೆಗಳಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಅಲ್ಪಸಂಖ್ಯಾತರ ಸಂಸ್ಥೆ ಎಂದು ಇಲಾಖೆ ಪರಿಗಣಿಸದ ನಂತರ ಪ್ರತಿ ವರ್ಷ ಅದನ್ನು ನವೀಕರಿಸಲು ಕೇಳುವ ಉದ್ದೇಶ ಏನು? ಇದರಿಂದ ಪ್ರತಿ ವರ್ಷ ಅಲ್ಪಸಂಖ್ಯಾತರ ಸಂಸ್ಥೆಗಳು ಇಲಾಖೆಗೆ ಅಲೆದಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) "ಆದೇಶ ಸಂಖ್ಯೆ:ಇಡಿ22ಎಂ.ಪಿ.ಎಸ್.2005 ದಿನಾಂಕ:12.12.2006"ರ ಆದೇಶದಲ್ಲಿ ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು